**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ವಾರ್ಡ್ DETER ಸಮಿತಿ (WDC) ವಾರ್ಡ್ ಸಂಖ್ಯೆ: 116 ನೀಲಸಂದ್ರ ವಾರ್ಡಿನ ದಿನಾಂಕ: 07-06-2021 ರಂದು ನಡೆದ ಸಭೆಯ ನಡವಳಿಗಳು**

ವಿಷಯ: ವಾರ್ಡ್ ಸಂಖ್ಯೆ 116 ನೀಲಸಂದ್ರ ವಾರ್ಡ್ DETER ಸಮಿತಿ (WDC) ಸಭೆಯ ನಡವಳಿ.

ಉಲ್ಲೇಖ: 1. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ನಂ.RD 158 TNR 2020, ದಿನಾಂಕ: 07-05-2021.

2. ಆಯುಕ್ತರ ಆದೇಶ ಸಂಖ್ಯೆ:ಬಿ12(ಕೋ-19)ಪಾರ್/04/21-22.
3. ವಾರ್ಡ್ ಕಮಿಟಿ ನೋಡಲ್ ಅಧಿಕಾರಿಗಳನ್ನು ನೇಮಿಸಿರುವ ಪರಿಷ್ಕೃತ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/20-21 ದಿನಾಂಕ: 16-04-2021.
4. ಸಭೆ ಸೂಚನಾ ಪತ್ರದ ದಿನಾಂಕ: 06.06.2021.

* * * * *

ಉಲ್ಲೇಖ (1) ರಿಂದ (4)ರ ಅನುಸಾರ ಮೇಲ್ಕಂಡ ಆದೇಶದಲ್ಲಿನ ಅಂಶಗಳನ್ನು ಪರಿಶೀಲಿಸಲು ವಾರ್ಡ್ ಸಂಖ್ಯೆ:-116 ನೀಲಸಂದ್ರ ಸಂಬಂಧಿಸಿದಂತೆ, ಕೋವಿಡ್-19 ಪ್ರಕರಣಗಳು ಹೆಚ್ಚಾಗಿರುವುದರಿಂದ ಸುರಕ್ಷಣಾ ದೃಷ್ಟಿಯಿಂದ Zoom Meeting ಅನ್ನು ದಿನಾಂಕ: 07-06-2021 ರಂದು ಮಧ್ಯಾಹನ 03.00 ಗಂಟೆಗೆ ಏರ್ಪಡಿಸಲಾಗಿದ್ದು ಸದರಿ ಸಭೆಯಲ್ಲಿ ನಡೆದ ಸಭೆಯ ನಡುವಳಿ.

ಸಭೆಗೆ ಹಾಜರಿದ್ದವರು

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು, ವಾರ್ಡ್ ಸಮಿತಿ ಸದಸ್ಯರು ಹಾಗೂ ಸಾರ್ವಜನಿಕರನ್ನು, ನೋಡಲ್ ಅಧಿಕಾರಿ ಡಾ॥ಸಂಘಮಿತ್ರ ರವರು ಸಭೆಯನ್ನು ಪ್ರಾರಂಭಿಸುತ್ತಾ ಸಭೆಗೆ ಹಾಜರಿದ್ದ ಅಧಿಕಾರಿಗಳನ್ನು ಮತ್ತು ವಾರ್ಡ್ ಸಮಿತಿ ಸದಸ್ಯರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಡಾ॥ಸಂಘಮಿತ್ರ, ಶಾಂತಿನಗರ ವಿಧಾನಸಭಾ ವ್ಯಾಪ್ತಿಯ ಡಿ.ಹೆಚ್.ಓ ಹಾಗೂ ವಾರ್ಡ್ ಸಂಖ್ಯೆ -116 (ನೀಲಸಂದ್ರ) ನೋಡಲ್ ಅಧಿಕಾರಿ ರವರು ವಾರ್ಡ್ ಮಟ್ಟದ ಕೋವಿಡ್ ನಿರ್ವಹಣೆ WDC (ವಾರ್ಡ್ DETER ಸಮಿತಿ) ವಿಕೇಂದ್ರೀಕೃತ ಚಿಕಿತ್ಸೆಯ ಸರದಿ ನಿರ್ಧಾರ ಮತ್ತು ತುರ್ತು ಪ್ರತಿಕ್ರಿಯೆ ಕೇಂದ್ರದ ರಚನೆ, ಸ್ವರೂಪ, ಕಾರ್ಯವಿಧಾನ, ಅಗತ್ಯತೆ ಹಾಗೂ ಕೋವಿಡ್-19ರ ನಿಯಂತ್ರಣ ಹಾಗೂ ಚಿಕಿತ್ಸೆ ಸಂಬಂಧ ತೆಗೆದುಕೊಳ್ಳಬೇಕಾದ ಕಾರ್ಯಗಳ ಬಗ್ಗೆ ಸಭೆಗೆ ವಿವರವಾಗಿ ತಿಳಿಸಿದರು.

ಮೊದಲನೆಯದಾಗಿ ವಾರ್ಡ್‌ನಲ್ಲಿ ಕೋವಿಡ್-19 ನಿಯಂತ್ರಣ ಸಂಬಂಧ WDC (ವಾರ್ಡ್ DETER ಸಮಿತಿ) "ಸಮಿತಿಯನ್ನು ರಚಿಸುವ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡುತ್ತಾ blcares.in ಮುಖಾಂತರ ವಾರ್ಡ್ ನಂ.116ಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಸ್ವಯಂ ಸೇವಕರು ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಲು ಅಗತ್ಯ ಕ್ರಮವಹಿಸಲು ಎಲ್ಲಾ ವಾರ್ಡ್ ಸಮಿತಿ ಸದಸ್ಯರುಗಳಿಗೆ ತಿಳಿಸಲಾಯಿತು. ಈಗಾಗಲೇ ವಾರ್ಡ್‌ನಲ್ಲಿರುವ ವೈದ್ಯರ, PARA MEDICAL, ನರ್ಸಿಂಗ್, ಆರೋಗ್ಯ ತಜ್ಞರು, ಸರ್ಕಾರಿ ಅಧಿಕಾರಿಗಳು, ಖಾಸಗಿ ಆಸ್ಪತ್ರೆಗಳ ಪಟ್ಟಿ (Nursing Home), Professional Institutions, Lodge ಮತ್ತು ಪ್ರಮುಖ ಮೂಲಭೂತ ಸೌಕರ್ಯಗಳ ಪಟ್ಟಿಯನ್ನು ಸಿದ್ಧಪಡಿಸಿ WARD DETER ಸಮಿತಿಗೆ ಸಲ್ಲಿಸಲು ಕೋರಲಾಯಿತು.

ಉಲ್ಲೇಖದಲ್ಲಿನ ಸರ್ಕಾರದ ಹಾಗೂ ಮಾನ್ಯ ಆಯುಕ್ತರ ಆದೇಶದಂತೆ ಈ ಕೆಳಕಂಡ ವ್ಯವಸ್ಥೆಗಳನ್ನು ವಾರ್ಡ್ ಮಟ್ಟದಲ್ಲಿ ಒದಗಿಸುವ ಅವಶ್ಯಕತೆಗಳ ಬಗ್ಗೆ ಸಭೆಗೆ ವಿವರಿಸಲಾಯಿತು.

1) ಪಿ.ಹೆಚ್.ಸಿ ಕರ್ತವ್ಯ ಜವಬ್ದಾರಿ ಹಾಗೂ ಸೌಲಭ್ಯಗಳ ಬಗ್ಗೆ.
2) ಲಸಿಕಾ ಕಾರ್ಯಕ್ರಮ ಮತ್ತು ಕೋವಿಡ್-19 ಪರೀಕ್ಷೆ ಮತ್ತು ಫಲಿತಾಂಶ ಶೀಘ್ರವಾಗಿ ನೀಡುವ ಬಗ್ಗೆ.
3) ವಾರ್ಡ್‌ವಾರು ವಾರ್ ರೂಂ ಮತ್ತು ಕಾಲ್‌ಸೆಂಟರ್ ಸ್ಥಾಪಿಸುವ ಬಗ್ಗೆ.
4) ಕಡ್ಡಾಯವಾಗಿ ವ್ಯವಸ್ಥಿತ Triage ಕೇಂದ್ರಗಳನ್ನು ಸ್ಥಾಪಿಸುವುದು.
5) ಆಕ್ಸಿಜನ್ ಮತ್ತು ಸ್ಟೆಪ್‌ಅಪ್/ಸ್ಟಬಲೈಜೆಶನ್ ಸೆಂಟರ್ ಸ್ಥಾಪಿಸುವುದು.
6) ಕೋವಿಡ್ ಕೇರ್ ಕೇಂದ್ರಗಳ ಸ್ಥಾಪನೆ ಮತ್ತು ನಿರ್ವಹಣೆ.
7) ಐ.ಇ.ಸಿ ಹಾಗೂ ಪ್ರಚಾರ ಕಾರ್ಯಕ್ರಮಗಳು
8) ಅಂಬ್ಯುಲೆನ್ಸ್, ಕಛೇರಿ ವಾಹನ, ಪೀಠೋಪಕರಣಗಳನ್ನು ಒದಗಿಸುವುದು ನುರಿತ ವೈದ್ಯರು ಹಾಗೂ ಆಡಳಿತ ವರ್ಗದ ಸಿಬ್ಬಂದಿಗಳನ್ನು ನೇಮಿಸಿ ನಿಯೋಜಿಸುವ ಬಗ್ಗೆ.

ಈ ನಿಟ್ಟಿನಲ್ಲಿ ಸುದೀರ್ಘವಾಗಿ ಚರ್ಚಿಸಿದ ನಂತರ ವಾರ್ಡ್ 116 ನೀಲಸಂದ್ರದಲ್ಲಿ ಸಮರ್ಪಕ ವಾರ್ಡ್ ಕಛೇರಿ ಲಭ್ಯವಿರದ ಕಾರಣ Triage Center ಸ್ಥಾಪಿಸಲು ವಾರ್ಡ್‌ನಲ್ಲಿ ಲಭ್ಯವಿರುವ ಕಟ್ಟಡಗಳನ್ನು ಆರೋಗ್ಯ ಇಲಾಖೆಯ ಸಮಾಲೋಚನೆಯೊಂದಿಗೆ ಸ್ಥಾಪಿಸಲು ತೀರ್ಮಾನಿಸಲಾಯಿತು.

ಮುಂದುವರೆದಂತೆ Triage Center ಸ್ಥಾಪನೆಗಾಗಿ ಸೂಕ್ತ ಕಟ್ಟಡವನ್ನು ಗುರುತಿಸುವ ಬಗ್ಗೆ ಹಾಗೂ ಕಟ್ಟಡದಲ್ಲಿ ಮೂಲ ಸೌಕರ್ಯಗಳನ್ನು ಒದಗಿಸುವ ಬಗ್ಗೆ ವಾರ್ಡ್ ಕಾರ್ಯದರ್ಶಿರವರಿಗೆ ಸೂಚಿಸಲಾಗಿ ಈ ಕೆಳಕಂಡ ಸ್ಥಳವಕಾಶ ಮಾಡಿಕೊಂಡು ಯೋಜನೆ ಅನುಷ್ಠಾನ ಮಾಡಲು ತುರ್ತು ಅಗತ್ಯ ಕ್ರಮ ವಹಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು

1) Triage Centre- ಸ್ಥಾಪಿಸಲು ಎಲ್.ಆರ್.ನಗರ ಮುಖ್ಯರಸ್ತೆಯ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಸಮುದಾಯ ಭವನ ಇಲ್ಲಿರುವ ಜಾಗವನ್ನು ಒದಗಿಸಿಕೊಂಡು Triage Centre- ವಿಸ್ತರಿಸುವ ಬಗ್ಗೆ ಕ್ರಮಕೈಗೊಳ್ಳಲು ವಾರ್ಡ್ ಸದಸ್ಯರೊಡನೆ ಸದರಿ ಸ್ಥಳಕ್ಕೆ ಭೇಟಿ ನೀಡಿ ಕ್ರಮ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು.